ದಿನಾಂಕ 16-12-2024 ರಂದು ಸಾಕ್ಷಿಗೆ ಪ್ರಮಾಣ ವಚನ  ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ   ವಾದಿಯವರ  ಪರವಾಗಿ ಶ್ರೀ ಡಿಬಿಎಸ್ ವಕೀಲರವರಿಂದಃ**

ನಾನು ಕೊನೆಯ ಬಾರಿ ವಿಲ್ ಬರೆದವರನ್ನು ಸಾಯುವಾಗ ನೋಡಿರುತ್ತೇನೆ. ನಾನು ಸಾಮಾನ್ಯವಾಗಿ ಒಂದು ವಾರದಲ್ಲಿ 2 ಬಾರಿ ಅವರನ್ನು ನೋಡಿದ್ದೆ.  ಮನೆ, ಕಿನ್ನಿಮುಲ್ಕಿ ಮತ್ತು ಕಟಪಾಡಿಯಲ್ಲಿರುವ ಆಸ್ಪತ್ರೆಯಲ್ಲಿ ನೋಡಿರುತ್ತೇನೆ.  ನಾನು ಅವರು ಮೃತಪಡುವ ಪೂರ್ವದಲ್ಲಿ ಕಿನ್ನಿಮುಲ್ಕಿಯಲ್ಲಿ ನಿರ್ದಿಷ್ಟವಾಗಿ ಯಾವಾಗ ನೋಡಿರುತ್ತೇನೆಂದು ಹೇಳಲು ಆಗುವುದಿಲ್ಲ.  ಅವರು  ಖಾಯಂ ಕಿನ್ನಿಮುಲ್ಕಿಯಲ್ಲಿ ವಾಸವಾಗಿದ್ದರು.  ಸ್ವಲ್ಪ ದಿವಸ ಕಟಪಾಡಿಯಲ್ಲಿರುವ ಅವರ ತಂಗಿ ಮನೆಯಲ್ಲಿಯೂ

ಸಹ ನೋಡಿರುತ್ತೇನೆ. ಅವರು ಮೃತಪಡುವ 2 ತಿಂಗಳ ತಂಗಿ ಮನೆಯಲ್ಲಿಯೂ ಸಹ ಇದ್ದರು ಮತ್ತು ಕಿನ್ನಿಮುಲ್ಕಿಯಲ್ಲಿಯೂ ಇದ್ದರು. 2 ತಿಂಗಳ ಹಿಂದೆ ಕಟಪಾಡಿಯಲ್ಲಿ ಅವರು ಇದ್ದ ಬಗ್ಗೆ ಅಲೆನ್ ನನಗೆ ಸಮಯಾನುಸಾರ ತಿಳಿಸುತ್ತಿದ್ದ. ಅಲೆನ್ ರವರ ಜೊತೆ ಮಾತನಾಡುವಾಗ ಕಷ್ಟ ಸುಖ ಹಂಚಿಕೊಳ್ಳುತಿದ್ದರು. ಅಲೆನ್ ರವರು ಯಾವ ಯಾವ ಬ್ಯಾಂಕ್ ಗಳಲ್ಲಿ ಯಾವ ಯಾವ ಖಾತೆಗಳನ್ನು ಹೊಂದಿದ್ದರು ಎಂದು ನನಗೆ ಯಾವಾಗಲೂ ತಿಳಿಸಿರಲಿಲ್ಲ. ಅಲೆನ್ ರವರ ಕಷ್ಟ ಸುಖಗಳ ಬಗ್ಗೆ ಕ್ಲೇರ ಜೊತೆ ಮಾತನಾಡಿರುವುದಿಲ್ಲ. ಅಲೆನ್ ರವರಿಗೆ ಹೃದಯ ರೋಗ ಸಮಸ್ಯೆ ಯಾವ ಸಮಯದಿಂದ ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಸದ್ರಿ ಆಸ್ಪತ್ರೆಯಲ್ಲಿ ನಾನು ಅಲೆನ್ ಜೊತೆ ಹೋಗಿದ್ದಕ್ಕೆ ಯಾವುದೇ ದಾಖಲೆಗಳಿರುವುದಿಲ್ಲ. ಕ್ಲೇರ ರವರು ಅವರನ್ನು ಕರೆದುಕೊಂಡು ಹೋಗಿರುವುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಕ್ಲೇರ ರವರು ಅಲೆನ್ ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಕ್ಲೇರ ರವರಿಗಿಂತ ಅಲೆನ್ ರವರು ನನಗೆ ನಿಕಟವಾಗಿದ್ದರು. ಅಲೆನ್ ರವರಿಗೆ ನನ್ನ ಮೇಲೆ ಪ್ರೀತಿ ಇತ್ತು. ಸದ್ರಿ ಆಸ್ತಿಯ ಬಗ್ಗೆ ಅಲೆನ್ ರವರು ನನ್ನ ಜೊತೆ ಮಾತನಾಡಿರುವುದಿಲ್ಲ, ಆದರೆ ವಿಲ್ ನ ಬಗ್ಗೆ ಒಂದು ಬಾರಿ ಮಾತನಾಡಿದ್ದರು.

ವಿಲ್ ನ ಬಗ್ಗೆ ನನ್ನ ಬಳಿ ಪೋನ್ ನಲ್ಲಿ ಮಾತನಾಡಿದ್ದರು. ಅಲೆನ್ ರವರು ಆಸ್ಪತ್ರೆಯಲ್ಲಿರುವಾಗ ವಿಲ್ ನ ಬಗ್ಗೆ ಮಾತನಾಡಿದ್ದರು. ಯಾವ ತಿಂಗಳು ಮತ್ತು ಯಾವ ದಿನ ಎಂದು ನನಗೆ ಹೇಳಲು ಸಾಧ್ಯವಿಲ್ಲ. ಸಾಕ್ಷಿಯವರು ಮುಂದುವರೆದು ಸೆಪ್ಟೆಂಬರ್ ಮಾತನಾಡಿರುತ್ತಾರೆಂದು ನುಡಿಯುತ್ತಾರೆ. ಆ ಸಮಯದಲ್ಲಿ ಅವರು ಆಸ್ಪತ್ರೆಯಲ್ಲಿದ್ದರು. ಸೆಪ್ಟೆಂಬರ್ ನಲ್ಲಿ ಆಸ್ಪತ್ರೆಗೆ ಹೋಗಿರುತ್ತೇನೆ. ಆ ರೀತಿ ನಾನು ಆಸ್ಪತ್ರೆಗೆ ಹೋಗುವ ಸಮಯದಲ್ಲಿ ಅಲೆನ್ ರವರು ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ನಾನು ಸೆಪ್ಟೆಂಬರ್ ನಲ್ಲಿ

ಆಸ್ಪತ್ರೆಗೆ ಹೋಗುವಾಗ ನನ್ನನ್ನು ಹೊರತುಪಡಿಸಿ ಅವರ ಜೊತೆಯಲ್ಲಿ ತಂಗಿ ಇದ್ದರು. ಆಸ್ಪತ್ರೆಗೆ ಅವರ ಮನೆಯಿಂದ ಕರೆದುಕೊಂಡು ಹೋಗಿರಬೇಕು ಆದರೆ ನನಗೆ ನಿಖರವಾಗಿ ಗೊತ್ತಿರುವುದಿಲ್ಲ. ನಾನು ಹೋಗುವ ಹಿಂದೆಯೂ ಸಹ ಅವರು ನು ಆಸ್ಪತ್ರೆಗೆ ದಾಖಲಾಗಿದ್ದರು. ಸಾಕ್ಷಿದಾರರು ಮುಂದುವರೆದು ಅವರು ಒಳರೋಗಿ ದಾಖಲಾಗಿದ್ದರು ಎಂದು ನುಡಿಯುತ್ತಾರೆ. ಸೆಪ್ಟೆಂಬರ್ ನಲ್ಲಿ ನಾನು ಹೋಗುವ ಸಮಯದಲ್ಲಿ ಒಂದೆರಡು ದಿನ ಹಿಂದೆ ಒಳರೋಗಿಯಾಗಿ ದಾಖಲಾಗಿದ್ದರು. ಅಲೆನ್ ರವರು ಕರೆ ಮಾಡಿದ ತಕ್ಷಣ ನಾನು ಆಸ್ಪತ್ರೆಗೆ ಹೋಗುತ್ತಿದ್ದೆ. ಒಂದು ವೇಳೆ ನಾನು ತುರ್ತು ಕೆಲಸದಲ್ಲಿರುವಾಗ ನಾನು ಹೋಗುತ್ತಿರಲಿಲ್ಲ. ಅಲೆನ್ ರವರು ವಿಲ್ ಬಗ್ಗೆ ಫೋನ್ ನಲ್ಲಿ ಮಾತನಾಡಿದ್ದರು, ವೈಯಕ್ತಿಕವಾಗಿ ಆಸ್ಪತ್ರೆಯಲ್ಲಿ ಸಿಕ್ಕಾಗ ಮಾತನಾಡಿರುವುದಿಲ್ಲ. ಅಲೆನ್ ರವರು ಫೋನ್ ನಲ್ಲಿ ನನಗೆ ಹುಷಾರಿಲ್ಲ, ಸಾಯುವುದು ಹೆದರಿಕೆ ಇದೆ ಅದಕ್ಕಾಗಿ ಒಂದು ವಿಲ್ ಗೆ ಸಹಿ ಮಾಡುತ್ತೀರಾ ಎಂದು ನನಗೆ ಕೇಳಿದ್ದರು. ಅಲೆನ್ ರವರು ಬಹುಶಃ 22 ನೇ ಸೆಪ್ಟೆಂಬರ್ ನಲ್ಲಿ ನನಗೆ ವಿಲ್ ನ ಬಗ್ಗೆ ಮಾತನಾಡಿರುತ್ತಾರೆ. ಸ್ವದ್ರಿ ವಿಲ್ ನ ಬಗ್ಗೆ ನನಗೆ 22 ನೇ ಸೆಪ್ಟೆಂಬರ್ 2020 ರಲ್ಲಿ ತಿಳಿಸಿರುತ್ತಾರೆ. 22 ನೇ ಸೆಪ್ಟೆಂಬರ್ 2020 ರಲ್ಲಿ ಅಲೆನ್ ರವರು ವಿಲ್ ನ್ನು ತಯಾರು ಮಾಡುತ್ತೇನೆಂದು ನನಗೆ ತಿಳಿಸಿರುತ್ತಾರೆ. ದಿನಾಂಕ 23.09.2020 ರಲ್ಲಿ ನನಗೆ ವಿಲ್ ನ ಮೇಲೆ ಸಹಿ ಮಾಡಲು ಕರೆಸಿರುತ್ತಾರೆ. ದಿನಾಂಕ 23.09.2020 ರಲ್ಲಿ ನನ್ನನ್ನು ಆಸ್ಪತ್ರೆಗೆ ಕರೆಸಿರುತ್ತಾರೆ. ದಿನಾಂಕ 23.09.2020 ರಂದು ಸಹಿ ಮಾಡಲು ಹೋಗುವ ಸಮಯದಲ್ಲಿ ಸ್ವದ್ರಿ ವಿಲ್ ನ್ನು ಅವರ ವಕೀಲರು ತಯಾರು ಮಾಡಿ ತಂದಿದ್ದರು. ನಾನು ಹೋದ 2 ರಿಂದ 3 ನಿಮಿಷಗಳ ನಂತರ ವಕೀಲರು ಬಂದಿದ್ದರು. ಆ ಸಮಯದಲ್ಲಿ ಸ್ವದ್ರಿ ದಿವಸ ವಿಲ್ ಮಾಡುವ ಸಮಯದಲ್ಲಿ ಕ್ಲೀರ ಇರಲಿಲ್ಲ. ನನ್ನನ್ನು ಹೊರತುಪಡಿಸಿ ಬೇರೆ ಯಾರೋ ಸಾಕ್ಷಿದಾರರು ಇದ್ದರು. ಆ ಸಮಯದಲ್ಲಿ ವೈದ್ಯರು ಮತ್ತು ನರ್ಸ್

ಯಾರೂ ಇರಲಿಲ್ಲ. ಅಲೆನ್ ರವರ ಸ್ಪೆಷಲ್ ಕೊಠಡಿಯಲ್ಲಿ ಇದ್ದರು. ಆಸ್ಪತ್ರೆ ಎಂದರೆ ಆದರ್ಶ ಆಸ್ಪತ್ರೆ. ದಿನಾಂಕ 23.09.2020 ರ ಒಂದು ದಿನ ಪೂರ್ವದಲ್ಲಿ ಸದ್ರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿರಬಹುದು. ನನಗೆ ವಕೀಲರ ಪರಿಚಯವಿರುವುದಿಲ್ಲ. ಸದ್ರಿ ದಿವಸ ವಕೀಲರು ನನಗೆ ಮೊದಲು ಸಿಕ್ಕಿದರು, ಅವರಿಗೆ ನಾನು ಪರಿಚಯವಿಲ್ಲ. ಆಸ್ಪತ್ರೆಯಲ್ಲಿ ಬಂದಂತಹ ವಕೀಲರಿಗೆ 40 ವರ್ಷಗಳಾಗಿರಬಹುದು. ವಕೀಲರಿಗೆ ಡ್ರಾಫ್ಟ್ ಮಾಡಲು ಮಾಹಿತಿಯನ್ನು ಕೊಡುವ ಸಮಯದಲ್ಲಿ ನಾನಿರಲಿಲ್ಲ. ವಕೀಲರ ಕಚೇರಿಯಲ್ಲಿ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ವಕೀಲರಿಗೆ ಯಾವ ರೀತಿ ಮಾಹಿತಿ ನೀಡಿದ್ದಾರೆಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಅಲೆನ್ ರವರ ಮನೆಯ ವಿಳಾಸ ಮತ್ತು ಅವರು ಯಾವ ವಾರ್ಡ್ನಲ್ಲಿ ಇದ್ದಾರೆಂದು ಯಾವ ಸರ್ವೆ ನಂಬರ್ ನಲ್ಲಿದ್ದಾರೆಂದು ಅಲೆನ್ ರವರಿಗೆ ಮಾಹಿತಿ ಇತ್ತು. ಅಲೆನ್ ರವರ ಜಾಗದಲ್ಲಿ ಹೈವೆಗೆ ಹೋಗಿ ಉಳಿದ ಜಾಗ ಎಷ್ಟು ಎಂದು ಮಾಹಿತಿ ಇರಬಹುದು. ಹೈವೆಗೆ ಹೋಗಿ ಉಳಿದ ಜಾಗದ ಬಗ್ಗೆ ಅಲೆನ್ ರವರು ನಿಖರವಾಗಿ ನಿಮಗೆ ಮಾಹಿತಿ ನೀಡಿದ್ದಾರಾ ಎಂದರೆ ಇಲ್ಲ. ನಮಗೆ ವಿಲ್ ನ ಬಗ್ಗೆ ವಕೀಲರು ಓದಿ ಹೇಳಿರುತ್ತಾರೆ. ನಾನಾಗಲೀ ಅಥವಾ ಉಳಿದವರಾಗಲೀ ಸದ್ರಿ ವಿಲ್ ನ್ನು ಓದಿ ನೋಡಿರುವುದಿಲ್ಲ. ನನಗೆ ಮತ್ತು ಉಳಿದವರಿಗೆಲ್ಲಾ ಕನ್ನಡ ಓದಲು ಬರುತ್ತದೆ. ಸದ್ರಿ ವಿಲ್ ನಲ್ಲಿ ಒಟ್ಟು 10 ಸೆಂಟ್ಸ್ ಜಾಗದಲ್ಲಿ ಜಾಸ್ತಿ ಆಸ್ತಿ ಹೈವೆಗೆ ಹೋಗಿರುತ್ತದೆ. ಉಳಿದ ಆಸ್ತಿಗೆ ವಿಲ್ ಮಾಡಿರುತ್ತಾರೆ. ಹೈವೆಗೆ ಎಷ್ಟು ಸೆಂಟ್ಸ್ ಹೋಗಿದೆ ಮತ್ತು ಎಷ್ಟು ಪರಿಹಾರ ಸಿಕ್ಕಿದೆಂದು ನನಗೆ ಅಲೆನ್ ರವರು ಹೇಳಿರುವುದಿಲ್ಲ. ಸಾಕ್ಷಿದಾರರು ಮುಂದುವರೆದು 2,00,000/- ಪರಿಹಾರ ಸಿಕ್ಕಿದ್ದು, ಅದನ್ನು ಅವರ ಸಹೋದರರಿಗೆ ಹೋಗಿದೆಂದು ಬಾಯ್ದೆರೆಯಲ್ಲಿ ಹೇಳಿರುತ್ತಾರೆಂದು ನುಡಿಯುತ್ತಾರೆ. ಹೈವೆಗೆ ಎಷ್ಟು ಸೆಂಟ್ಸ್ ಹೋಗಿದೆ ಎನ್ನುವುದರ ಬಗ್ಗೆ ಅಲೆನ್ ರವರಿಗೆ ಮಾಹಿತಿ ಇತ್ತು. ಅಲಿನ್ ರವರು

ವಾಸಿಸುತ್ತಿರುವ ಮನೆಗೆ ಹೆಸರು ಮೆಂಡೋನ್ಸ ವಿಲ್ಲಾ ಅಂತ ಇತ್ತು, ತದನಂತರ ಸ್ವಲ್ಪ ಆಸ್ತಿ ಹೈವೆಗೆ ಹೋದ ಹೊಸ ಹೆಸರು ಏನು ಇಟ್ಟಿದ್ದಾರೆಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯವರಿಗೆ ಒಂದು ವಿಲ್ ನ್ನು ತೋರಿಸಲಾಗಿ ಅದನ್ನು ನೋಡಿ ಸಾಕ್ಷಿದಾರರು ನೋಡಿ ಗುರ್ತಿಸಿರುತ್ತಾರೆ ಅದನ್ನು ಈಗಾಗಲೇ ನಿಪಿ.10 ಎಂದು ಗುರ್ತಿಸಲಾಗಿದ್ದು, ಸಾಕ್ಷಿದಾರರ ಸಹಿಯನ್ನು ಈಗಾಗಲೇ ನಿಪಿ.10(ಎ) ಎಂದು ಗುರ್ತಿಸಲಾಗಿತ್ತು. ನಿಡಿ.10 ಕ್ಕೆ ನನ್ನ ವಿಳಾಸವನ್ನು ನಾನೇ ಬರೆದಿರುತ್ತೇನೆ. ಅದರಂತೆ 2 ನೇ ಸಾಕ್ಷಿದಾರರ ವಿಳಾಸ ಯಾರು ಬರೆದಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಸದ್ರಿ ವಿಲ್ ಗೆ ಪ್ರಥಮವಾಗಿ ಯಾರು ಸಹಿ ಮಾಡಿದ್ದರು ಮತ್ತು ಕೊನೆಯದಾಗಿ ಯಾರು ಸಹಿ ಮಾಡಿರುತ್ತಾರೆಂದು ನನಗೆ ನೆನಪಿದೆ. ನನ್ನ ಪ್ರಕಾರ ಕೊನೆಯದಾಗಿ ವಕೀಲರು ದಸ್ಕತ್ ಮಾಡಿರುತ್ತಾರೆ. ಸದ್ರಿ ವಿಲ್ ನಾಮೆಗೆ ವಕೀಲರು ದಸ್ಕತ್ ನ್ನು ಮೊದಲು ಹಾಕಿ ಶೀಲ್ ಮಾಡಿದ್ದರಾ ಅಥವಾ ಶೀಲ್ ಹಾಕಿ ದಸ್ಕತ್ ಹಾಕಿರುತ್ತಾರಾ ಎಂದು ನನಗೆ ನೆನಪಿರುವುದಿಲ್ಲ. ಸದ್ರಿ ವಿಲ್ ಗೆ ವಕೀಲರ ಶೀಲ್ ಹಾಕಿದ ಬಗ್ಗೆ ನನಗೆ ನೆನಪಿರುವುದಿಲ್ಲ. ವಕೀಲರು ದಸ್ಕತ್ ಹಾಕಿದ ನಂತರ ಯಾರಾದರೂ ಸಹಿಯ ಕೆಳಗಡೆ ದಿನಾಂಕ ನಮೂದಿಸಿದ ಬಗ್ಗೆ ನನಗೆ ನೆನಪಿರುವುದಿಲ್ಲ. ಸದ್ರಿ ವಿಲ್ ನಾಮೆಯನ್ನು ನಾನು ಕೊನೆಯ ಬಾರಿ ಆ ದಿನವೇ ನೋಡಿರುವುದು ನಂತರ ನೋಡಿರುವುದಿಲ್ಲ. ಸದ್ರಿ ವಿಲ್ ನಾಮೆಗೆ ಅಲೆನ್ ರವರು ದಿನಾಂಕ 23.09.2020 ರಂದು ಸಹಿ ಹಾಕಿರುತ್ತಾರೆ. ಸದ್ರಿ ವಿಲ್ ನಾಮೆಗೆ ಅಲೆನ್ ರವರು ಸಹಿ ಹಾಕಿದ್ದು, ಸದ್ರಿ ಪತ್ರ ಮೊದಲನೆಯದಾಗಿ ಸ್ಟ್ಯಾಂಪ್ ಪೇಪರ್, ಉಳಿದ ಪುಟ ಗ್ರೀನ್ ಶೀಟ್ ನಲ್ಲಿತ್ತು. ಸದ್ರಿ ವಿಲ್ ನೊಂದಣಿಯಾಗಿರುವುದಿಲ್ಲ. ಸದ್ರಿ ದಿವಸ ಅಲೆನ್ ರವರು 4 ದಸ್ಕತ್ ಗಳನ್ನು ಹಾಕಿರುತ್ತಾರೆ. ಸದ್ರಿ ವಿಲ್ ನಾಮೆಗೆ ಅಲೆನ್ ರವರು ದಸ್ಕತ್ ಹಾಕಿದ ಬಗ್ಗೆ ಬೇರೆ ಕಡೆ ನೋಡಿರುವುದಿಲ್ಲ. ಅಲೆನ್ ರವರು ಸಹಿ ಮಾಡುವ ಸಮಯದಲ್ಲಿ ಕೈ ಅಲುಗಾಡುತ್ತಿತ್ತೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ. ಅಲೆನ್

ರವರು ಯಾವುದೇ ಪತ್ರ ಬರೆದಿರುವುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆಸ್ಪತ್ರೆಯವರಿಗೆ ಸದ್ರಿ ವಿಲ್ ನ್ನು ತಯಾರು ಮಾಡುವ ವಿಷಯ ನನಗೆ ಗೊತ್ತಿರುವುದಿಲ್ಲ. ಜಯಂತಿಯವರು ಮಣಿಪಾಲದವರು ಅವರು ನನಗೆ ಪರಿಚಯಸ್ಥರಲ್ಲ ಸದ್ರಿ ದಿನವೇ ನೋಡಿರುವುದು. ಅವರ ಮನೆ ಮಣಿಪುರದಲ್ಲಿರಬಹುದು. 2 ನೇ ಸಾಕ್ಷಿದಾರರು ಯಾವ ಉದ್ದೇಶಕ್ಕಾಗಿ ಬಂದಿದ್ದರೆಂದು ನನಗೆ ಗೊತ್ತಿರುವುದಿಲ್ಲ. 2 ನೇ ಸಾಕ್ಷಿದಾರರು ಮತ್ತು ಕ್ಲೇರ ರವರ ನಡುವೆ ಒಡನಾಟದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಿಲ್ ಗೆ 2 ನೇ ಸಾಕ್ಷಿದಾರರು ಸಹಿ ಮಾಡಿದ್ದನ್ನು ನಾನು ನೋಡಿರುತ್ತೇನೆ.

ಸದ್ರಿ ಸ್ಟ್ಯಾಂಪ್ ಪೇಪರ್ ಯಾರು ಖರೀದಿ ಮಾಡಿದ್ದು ಮತ್ತು ಯಾರ ಹೆಸರಿನಲ್ಲಿ ಖರೀದಿ ಮಾಡಿದ್ದಾರೆಂದು ನನಗೆ ಗೊತ್ತಿರುವುದಿಲ್ಲ. ಕ್ಲೇರರವರ ಮನೆ ಕಟಪಾಡಿಯಲ್ಲಿರುತ್ತದೆ. ಸದ್ರಿ ವಿಲ್ ನಾಮೆಯಲ್ಲಿ ಎಷ್ಟು ಅಂಶದ ಹಕ್ಕಿದೆ ಎಂದು ನನಗೆ ಗೊತ್ತಿರುವುದಿಲ್ಲ. ಸದ್ರಿ ವಿಲ್ ನಾಮೆಯನ್ನು ಬರೆಯುವ ಸಮಯದಲ್ಲಿ ಅಲೆನ್ ರವರ ಯಾವ ಯಾವ ಬ್ಯಾಂಕ್ ಗಳಲ್ಲಿ ಯಾವ ಯಾವ ಖಾತೆಗಳಲ್ಲಿ ಎಷ್ಟೆಷ್ಟು ಹಣ ಇತ್ತೆಂಬುದರ ಬಗ್ಗೆ ಮಾಹಿತಿ ಅಲೆನ್ ರವರಿಗೆ ಮಾಹಿತಿ ಇತ್ತು. ಅಲೆನ್ ರವರ ಆಸ್ಪತ್ರೆಯ ಖರ್ಚು ವೆಚ್ಚಗಳನ್ನು ಅವರೇ ನೀಡುತ್ತಿದ್ದರು. ನಾನು ದಸ್ಕತ್ ಮಾಡಿದ್ದೇನೆಂದು ಹೇಳುವ ವಿಲ್ ನಾಮೆಯ ಬಗ್ಗೆ ವಕೀಲರು ನನಗೆ ಓದಿ ಹೇಳಿದ ಬಗ್ಗೆ ನೆನಪಿರುವುದಿಲ್ಲ. ಸದ್ರಿ ವಿಲ್ ನಾಮೆಯ ದಿನಾಂಕವನ್ನು ನಾನು ಕ್ಲೇರ ರವರು ಹೇಳಿದ ಪ್ರಕಾರ ಹೇಳುತ್ತಿದ್ದೇನೆ ಅದಕ್ಕಾಗಿ ನನಗೆ ನೆನಪಿದೆ. ಎಷ್ಟು ಮೌಲ್ಯದ ಸ್ಟ್ಯಾಂಪ್ ಪೇಪರ್ ಎನ್ನುವುದು ನನಗೆ ಗೊತ್ತಿರುವುದಿಲ್ಲ. ನನಗೆ ಓದಿ ಹೇಳಿದಂತಹ ವಿಲ್ ನಾಮೆಯಲ್ಲಿ ನಮೂದು ಮಾಡಿರುವ ಡೋರ್ ನಂಬರ್ ನನಗೆ ನೆನಪಿರುವುದಿಲ್ಲ. ನನಗೆ ಓದಿ ಹೇಳಿದಂತಹ ವಿಲ್ ನಾಮೆಯು ಅಂಬಲಪಾಡಿ ವಾರ್ಡ್ ಗೆ ಸಂಬಂಧಪಟ್ಟ ಆಸ್ತಿಯಾಗಿರುತ್ತದೆ.

ಅಲೆನ್ ರವರು ಬರೆದಿರುವ ವಿಲ್ ಅಂಬಲಪಾಡಿ ವಾರ್ಡ್ ಗೆ ಸಂಬಂಧಪಟ್ಟ ಆಸ್ತಿಯ ಬಗ್ಗೆ ಹೇಳುತ್ತಿದ್ದೇನೆ. ಸದ್ರಿ ದಾವೆಯಲ್ಲಿ ಕೇಳಿರುವಂತಹ ಆಸ್ತಿ ಉಡುಪಿ ನಗರ ಸಭೆಯ ಕನ್ನರ್ಪಾಡಿ ವಾರ್ಡ್ ಗೆ ಸಂಬಂಧಪಟ್ಟ ಆಸ್ತಿಯಾಗಿರುತ್ತದೆ. ಸದ್ರಿ ಆಸ್ತಿಗೆ ಸಂಬಂಧಪಟ್ಟ ಖಾತೆ ಯಾರ ಹೆಸರಿಗೆ ಇದೆಂದು ನನಗೆ ಗೊತ್ತಿರುವುದಿಲ್ಲ. ಕ್ಲೇರವರನ್ನು ನಾನು ಈ ದಿನ ಮಾತನಾಡಿ ಬಂದಿರುವುದಿಲ್ಲ. ನನಗೆ ಓದಿ ಹೇಳಿದಂತಹ ವಿಲ್ ನಾಮೆ ಅಲೆನ್ ರವರು ವಿವಾಹಿತರಾ ಅಥವಾ ಅವಿವಾಹಿತರಾ ಎಂದು ಓದಿ ಹೇಳಿದ ಬಗ್ಗೆ ನನಗೆ ನೆನಪಿರುವುದಿಲ್ಲ. ಅಲೆನ್ ರವರಿಗೆ ಮದುವೆಯಾಗಿ ಹೆಂಡತಿ ಇರುವ ವಿಷಯ ಗೊತ್ತಿರುತ್ತದೆ. ಅಲೆನ್ ರವರ ಹೆಂಡತಿಯ ಬಗ್ಗೆ ವಿಲ್ ನಾಮೆಯಲ್ಲಿ ಹೇಳಿರುವ ಬಗ್ಗೆ ನನಗೆ ನೆನಪಿಲ್ಲ. ಅಲೆನ್ ರವರ ಹೆಂಡತಿಯ ಬಗ್ಗೆ ನನ್ನ ಜೊತೆ ಕರೆ ಮಾಡಿ ಹೇಳಿರಲಿಲ್ಲ. ಸದ್ರಿ ವಿಲ್ ನಾಮೆಯನ್ನು ಯಾವ ಕಾರಣಕ್ಕಾಗಿ ಬರೆದಿದ್ದಾರೆಂದು ನನ್ನ ಬಳಿ ಹೇಳಿರುವುದಿಲ್ಲ. ನಾನು ಮತ್ತು ಕ್ಲೇರವರು, ಸಾಕ್ಷಿದಾರರು ಮತ್ತು ವಕೀಲರು ಎಲ್ಲರೂ ಒಟ್ಟಿಗೆ ಸೇರಿ ಕ್ಲೇರವರಿಗೆ ಸಹಾಯ ಮಾಡುವ ಉದ್ದೇಶದಿಂದ ತಯಾರು ಮಾಡಿಸಿದ ವಿಲ್ ಎಂದರೆ ಸರಿಯಲ್ಲ. ನಿಪಿ.10 ರಲ್ಲಿ ಕಾಣಿಸಿದೆನ್ನಲಾದ ದಸ್ಕತ್ ಅಲೆನ್ ರವರದ್ದಲ್ಲ, ಅಲೆನ್ ರವರು ಮೃತಪಟ್ಟ ನಂತರ ಅವರ ಸಹಿಯನ್ನು ನಾವೇ ಖೋಟಾ ಮಾಡಿ ಹಾಕಿದ್ದು ಎಂದರೆ ಸರಿಯಲ್ಲ. ವಾದಿಯವರಿಗೆ ಮೋಸ ಮಾಡುವ ಉದ್ದೇಶದಿಂದ ಅಲೆನ್ ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅಲೆನ್ ರವರಿಗೆ ಮತ್ತು ನನ್ನ ನಡುವೆ ಯಾವುದೇ ಒಡನಾಟ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಒಡನಾಟ ಇದೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಡಿ.10 ರಂತೆ ಅಲೆನ್ ರವರಿಗೆ ವಿಲ್ ಮಾಡಲು ಯಾವುದೇ ಪ್ರಮೇಯ ಇರಲಿಲ್ಲವೆಂದರೆ ಸರಿಯಲ್ಲ. ವಾದಿಯವರಿಗೆ ಯಾವುದೇ

ರೀತಿಯ ಪಾಲು ಸಿಗಬಾರದೆಂಬ ದುರುದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಸಿಜೆಎಂ,
ಉಡುಪಿ.